ಫೋನದಾಗೆಲ್ಲ ತಿಳಿಸ್ಯಾರು. ಆ ಮರ ಕಡಿದು ಅಲ್ಲೆ ಮಂಗಲ ಭವನ ಕಟ್ಟಬೇಕು ಅನ್ನುವ ಇರಾದೆ ಏನು ಪಂಚಾಕ್ಷರಿದು. ಬ್ಯಾರೆ ಕಡೆ ಜಾಗ ಇಲ್ಲನ ಅಂವಗ. ಈಗ ಊರಾಗ ಒಂದ ದೆವ್ವಿನಂತ ಭವನ ಐತಿ. ಮತ್ತ ಈಗ್ಯಾಕ ಮತ್ತೊಂದ ಕಟ್ಟಿಸಾಕ ಹೊಂಟಾನ ಆಂವ. ಬ್ಯಾರೆ ದಗದ ಇಲ್ಲನ ಅವಂಗ. ಅಂತೂ ಬ್ಹಾಳ ಘಮಂಡಿಗೆ ಬಂದಾನ ಬಿಡು."

"ಅವನಾರ ಏನ ಮಾಡ್ತಾನ. ಕೈಯಾಗ ಅಧಿಕಾರ ಅದ. ಅದ್ಕ ಹಾರ್‍ಯಾಡಾಕ ಹತ್ಯಾನ."

"ಅಧಿಕಾರ ಏನು ಮಾಡ್ತದ. ಮೈಯಾನ ಸೊಕ್ಕು ಅದು."

"ಅಷ್ಟ ಅಲ್ಲ, ಆಫೀಸರು ಅವನ ಮಾತಿನಾಂಗ ತಾಳ ಹಾಕಾಕ ಹತ್ಯಾರ, ಅಲ್ದ ಅವಗ ಮದತ್ ಮಾಡ್ತಾರ. ಮೊನ್ನೆ ಅಂತೂ ಪರಪ್ಪಜ್ಜ, ಮಹಾಲಿಂಗಪ್ಪ ಕಾಕಾ, ಚನ್ನಬಸಯ್ಯ ಮಾವನ ಜೊತಿ ಎಷ್ಟ ಹಾಕ್ಯಾಟ ಮಾಡಿದ ಅಂತಿ. ನನಗಂತೂ ಅವನ ಕಡಿಯೋ ಅಷ್ಟ ಸಿಟ್ಟ ಬಂದಿತ್ತ."

"ಅಷ್ಟ ದೀರ್ಘಕ ಹೋಗೇತಿ. ಹಂಗಾದ್ರ ಜರೂರ ಒಂದ ತೀರ್ಮಾನಕ ಬರಬೇಕ. ಅಷ್ಟು ಸೊಕ್ಕಿಗೆ ಬಂದಾನಂತ ತಿಳಿದಿರಲಿಲ್ಲ ನಾನು. ಹುಂ, ವಿಷ್ಯ ಅಷ್ಟ ಸರಳ ಇಲ್ಲ ಅಂದಂಗಾತು. ಇರ್ಲಿ ಶಂಕ್ರೂ, ಮುಂಜಾನಿ ಊರಿಗೆ ಹೊರಡೋಣ ಅಂತ" ಎಂದು ಹೇಳಿ ಊಟ ಮಾಡಿ ಮಲಗಿದಾಗ ವಿಶ್ವನಿಗೆ ನಿದ್ರೆ ಬಾರದೆ ಅವನ ತಲೆಯಲ್ಲಿ ತುಂಬಿಕೊಂಡಿದ್ದು ಪರಪ್ಪಜ್ಜ, ಆಲದ ಮರ ಮತ್ತು ಆ ಕಟ್ಟೆ ಮಾತ್ರ.

★★★

